ಸಿ.ಸಿ .ನಂ.160/2023                    ಪಿಡಬ್ಲೂಃ 2

ದಿನಾಂಕಃ 09-01-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ಪಿ ಎಸ್ ಎನ್ ವಕೀಲರಿಂದಃ**

5. ನಮ್ಮ ಬ್ಯಾಂಕಿನ ಸಾಲದ ಕರಾರು ಪತ್ರ , ಮುದ್ದತ್ತು ವಚನ ಪತ್ರ , ಡಿಮಾಂಡ ಪ್ರಾಮಿಸರಿ ನೋಟ್, ಹೈಪೋಥಿಕೇಶನ್ ಎಗ್ರಿಮೆಂಟ್ ಈ ಎಲ್ಲಾ ದಾಖಲಾತಿಗಳನ್ನು ಸಾಕ್ಷಿದಾರರ ಸಹಿ ಪಡೆಯಲು ಫಾರ್ಮೆಟ್ ಇದೆ ಎಂದರೆ ಸರಿ . ಅದರ ಮೇಲೆ ಯಾರು ಯಾರು ಸಹಿ ಹಾಕಿದ್ದಾರೆ ಅದನ್ನು ಖಚಿತ ಪಡಿಸಿಕೊಳ್ಳಲು ಪುರಾವೆ ಮಾಡಲು ಸದರಿ ಸಹಿಗಳನ್ನು ಪಡೆಯಲಾಗುತ್ತದೆ ಎಂದರೆ ಸರಿ . ಈ ಪ್ರಕರಣದಲ್ಲಿ ಒಬ್ಬರು ಸಾಕ್ಷಿದಾರರ ಸಹಿಯನ್ನು ಪಡೆದುಕೊಂಡಿದ್ದೇವೆ . ಅವರ ಸಾಕ್ಷಿ ವಿಚಾರಣ ಮಾಡಿಸಲು ಯಾವುದೇ ತೊಂದರೆ ಇಲ್ಲ. ಅವರ ಹೆಸರು ನವೀನ ಎಮ್ ಹರಿಕಂತ್ರ , ಅವರು ನಾಗೂರು ಸಂತೆಗದ್ದೆಯವರು . ಈ ಪ್ರಕರಣದಲ್ಲಿ ಸಾಲ ಮಂಜೂರಾದ ನಂತರ ಸಾಲದ ಹಣವನ್ನು ಯಾವ ರೀತಿ ಸಂದಾಯ ಮಾಡಿದ್ದೇವೆ ಎಂದು ದಾಖಲೆ ನೋಡಿ ಹೇಳಬೇಕು . ಕ್ಯಾಶ್ ಕೊಟ್ಟಿದ್ದರೆ ವಿತ್ ಡ್ರಾವಲ್ ಸ್ಲಿಪ್ , ಅಕೌಂಟ್ ಟ್ರಾ ಮಾಡಿದ್ದರೆ ನೆಟ್ಟ ನೋಡಬೇಕಾಗುತ್ತದೆ . ಯಾವುದೇ ದಾಖಲಾತಿಯನ್ನು ನೋಡಿದ್ದರೆ ನನಗೆ ನೆನಪಿರುತ್ತಿತ್ತು ಎಂದರೆ ಸರಿ . ಈವರೆಗೂ ನಾನು ಯಾವುದೇ ದಾಖಲಾತಿಯನ್ನು ನೋಡದೆ ಇರುವ ಕಾರಣ ಈಗ ಆಫೀಸ್ ನಲ್ಲಿ ಹೋಗಿ ನೋಡಬೇಕು ಎಂದು ಹೇಳುತ್ತಿದ್ದೇನೆ ಎಂದರೆ ಸರಿ . ಅಂತಹ ದಾಖಲಾತಿಯನ್ನು ಈ ಪ್ರಕರಣವನ್ನು ಪ್ರತಿನಿಧಿದವರು ಹಾಜರು ಪಡಿಸಿಲ್ಲ ಎಂದರೆ ಸರಿ . ಅಂತಹ ದಾಖಲಾತಿಗಳು ಇದ್ದರೆ ಪ್ರಕರಣವನ್ನು ದಾಖಲಿಸುವ ಸಮಯದಲ್ಲಿ ಹಾಜರು ಮಾಡುತ್ತಾರೆ ಎಂದರೆ ಸಾಕ್ಷಿ ನ್ಯಾಯಾಲಯ ಕೇಳಿದಾಗ ಹಾಜರು ಪಡಿಸುತ್ತೇವೆ ಎಂದು ನುಡಿದಿರುತ್ತಾರೆ . ಅಂತಹ ಯಾವುದೇ ದಾಖಲಾತಿ ಇಲ್ಲದ ಕಾರಣ ನಾನು ಈವರೆಗೂ ಅಂತಹ ದಾಖಲಾತಿ ನೋಡಿಲ್ಲ ಎಂದರೆ ಸರಿಯಲ್ಲ . ನ್ಯಾಯಾಲಯದಿಂದ ಆದೇಶವಾದರೆ ಅಂತಹ ದಾಖಲಾತಿಯನ್ನು ಸೃಷ್ಟಿಸಿಕೊಂಡು ನಾವು ಹಾಜರು ಪಡಿಸುತ್ತೇವೆ ಎಂದರೆ

ಸರಿಯಲ್ಲ. ಈ ಪ್ರಕರಣದಲ್ಲಿರುವ ದಾಖಲಾತಿಗಳಲ್ಲಿರುವ ಬರವಣಿಗೆ ನಾನು ಇರುವಾಗ ನನ್ನ ಮುಂದೆ ಮಾಡಿರುವ ಬರವಣಿಗೆ ಅಲ್ಲ ಎಂದರೆ ಸರಿ . ಹಾಗಾಗಿ ಈ ಪ್ರಕರಣದಲ್ಲಿರುವ ಬರವಣಿಗೆ ಮತ್ತು ಸಹಿಗಳು ಯಾರು ಯಾರದ್ದು ಎಂದು ನನಗೆ ಖಚಿತವಾಗಿ ಹೇಳಲು ಆಗುವುದಿಲ್ಲ ಎಂದರೆ ಸರಿ . ಈ ಪ್ರಕರಣದಲ್ಲಿ ಯಾರ ಮುಂದೆ ಬರವಣಿಗೆ ಹಾಗೂ ಸಹಿ ಆಗಿದೆ ಆ ವ್ಯಕ್ತಿಯೇ ಅದನ್ನು ಯಾರು ಮಾಡಿದ್ದಾರೆ ಎಂದು ಹೇಳಲು ಸೂಕ್ತವಾದ ವ್ಯಕ್ತಿ ಎಂದರೆ ಸರಿ . ನನ್ನ ಪ್ರಕಾರ ಈ ಬರವಣಿಗೆ ಶಾಖಾ ವ್ಯವಸ್ಥಾಪಕರಾದ ಬಸವರಾಜರವರ ಮುಂದೆ ಆಗಿರುತ್ತದೆ. ಅವರೇ ಮೊದಲು ಈ ಪ್ರಕರಣವನ್ನು ದಾಖಲಿಸಿರುತ್ತಾರೆ ಎಂದರೆ ಸರಿ . ಅವರು ಈಗಲೂ ಕೂಡ ನಮ್ಮ ಬ್ಯಾಂಕಿನ ಕೆಲವು ಪ್ರಕರಣಗಳನ್ನು ಪ್ರತಿನಿಧಿಸುತ್ತಿದ್ದಾರೆ ಎಂದರೆ ಸರಿ . ಹಾಗಾಗಿ ಅವರಿಗೆ ನ್ಯಾಯಾಲಯಕ್ಕೆ ಹಾಜರಾಗಲು ತೊಂದರೆ ಇಲ್ಲ ಎಂದರೆ ಸರಿ . ಈ ಪ್ರಕರಣದಲ್ಲಿರುವ ಹಾಜರು ಮಾಡಿರುವ ದಾಖಲಾತಿಗಳ ಮೇಲಿರುವ ಸಹಿಗಳನ್ನು ಊಹೆ ಮಾಡಿ ಇಂತಹವರ ಸಹಿಗಳೆಂದು ಹೇಳಬಹುದು ಹೊರತು ಖಚಿತವಾಗಿ ಅವರದ್ದೇ ಸಹಿ ಎಂದು ಹೇಳಲು ಆಗುವುದಿಲ್ಲ ಎಂದರೆ ಸಾಕ್ಷಿ ನನ್ನ ಮುಂದೆ ಸಹಿ ಮಾಡಿದ್ದಾರೆ ಎಂದು ಹೇಳಲು ಆಗುವುದಿಲ್ಲ ಎಂದು ನುಡಿದಿರುತ್ತಾರೆ . ನಾನು ಸಹಿಗಳನ್ನು ಗುರುತಿಸಲು ಎಕ್ಸಪರ್ಟ ಅಲ್ಲ ಎಂದರೆ ಸರಿ .

6. ಗಂಗಾವಳಿಯಲ್ಲಿ ನಾಗರಾಜ ನಾರಾಯಣ ನಾಯ್ಕ ಎಂಬುವವರು ತುಂಬಾ ಜನರು ಇದ್ದಾರೆ ಎಂದರೆ ಇರಬಹುದು . ನಾಗರಾಜ ನಾರಾಯಣ ನಾಯ್ಕ, ಕೆಸ್ ಆರ್ ಟಿ ಸಿ ಡ್ರೈವರ್ ಎಂದು ನಿಖರವಾಗಿ ಅವರ ಉದ್ಯೋಗವನ್ನು ನಮೂದಿಸಿ ನೋಟಿಸನ್ನು ನೀಡಿದರೆ ಅದು ಅವರಿಗೆ ವೈಯಕ್ತಿಕವಾಗಿ ತಲುಪುತ್ತಿತ್ತು ಎಂದರೆ ಸರಿ . ಬ್ಯಾಂಕ್ ನೋಟಿಸ್ ಆದರೆ ಅವರ ಉದ್ಯೋಗವನ್ನು ನಮೂದು ಮಾಡುವುದಿಲ್ಲ, ವಕೀಲರ ಮೂಲಕ ನೋಟಿಸು ಹೋದರೆ ಅವರ ಉದ್ಯೋಗವನ್ನು ನಮೂದಿಸುತ್ತಾರೆ ಎಂದು ನುಡಿದಿರುತ್ತಾರೆ . ನೋಟಿಸಿನಲ್ಲಿ ನೋಟಿಸು ವೈಯಕ್ತಿವಾಗಿ ಅವರಿಗೆ ತಲುಪಬೇಕೆಂಬ ಉದ್ದೇಶದಿಂದ ಅವರ ಉದ್ಯೋಗವನ್ನು ನಮೂದಿಸಲಾಗುತ್ತದೆ ಎಂದರೆ ಸರಿ . ವಕೀಲರ ನೋಟಿಸಿನಲ್ಲಿ ಅವರ ಉದ್ಯೋಗವನ್ನು ನಮೂದಿಸದೇ

ಇದ್ದಾಗ ಸದರಿ ನೋಟಿಸು ಬೇರೆಯವರಿಗೆ ಜಾರಿಯಾಗುವ ಸಾಧ್ಯತೆ ಇರುತ್ತದೆ ಎಂದರೆ ಸರಿ . ನಿಪಿ-6 ಆರೋಪಿಗೆ ಕೊಟ್ಟಿರುವ ನೋಟಿಸು. ನಿಪಿ-6 ರಲ್ಲಿ ಆರೋಪಿ ಯಾವ ಉದ್ಯೋಗ ಮಾಡುತ್ತಾರೆ ನಮೂದಾಗಿಲ್ಲ ಎಂದರೆ ಸರಿ . ನಾವು ಕಳಿಸಿದ್ದೇವೆ ಎಂದು ಹೇಳುವ ನೋಟಿಸಿನಲ್ಲಿ ಅವರ ಉದ್ಯೋಗವನ್ನು ಯಾಕೆ ನಮೂದಿಸಿಲ್ಲ ಗೊತ್ತಿಲ್ಲ. ಆರೋಪಿ ಈ ಪ್ರಕರಣದ ಸಾಲಗಾರರಲ್ಲ ಎಂದರೆ ಸರಿ . ನಾವು ಕಳಿಸಿದ ನೋಟಿಸಿನಲ್ಲಿ ಆರೋಪಿಯ ಉದ್ಯೋಗವನ್ನು ನಮೂದಿಸಿದರೆ ಅದು ಅವರಿಗೆ ತಲುಪುತ್ತಿತ್ತು ಹಾಗೂ ಬೇರೆಯವರಿಗೆ ತಲುಪುತ್ತಿರಲಿಲ್ಲ ಎಂದರೆ ಸಾಕ್ಷಿ ಅದು ಆರೋಪಿಗೆ ತಲುಪಿದೆ ಎಂದು ನುಡಿದಿರುತ್ತಾರೆ . ಆರೋಪಿ ನೋಟಿಸನ್ನು ಸ್ವೀಕರಿಸಿದ್ದಾರೆ. ಒಂದು ಅಂಚೆ ಸ್ವೀಕೃತ ಆದಾಗ ಅದನ್ನು ಯಾರು ಸ್ವೀಕರಿಸಿದ್ದಾರೆ ಅವರ ಸಹಿ ಇರುತ್ತದೆ ಎಂದರೆ ಸರಿ . ಅವರ ಸಹಿ ಆಧಾರದ ಮೇಲೆ ಅದು ಅವರಿಗೆ ತಲುಪಿದೆ ಎಂದು ಹೇಳಲಾಗುತ್ತದೆ ಎಂದರೆ ಸರಿ . ಅಂತಹ ಸಹಿ ಇರುವ ಸ್ವೀಕೃತಿಯನ್ನು ನಾನು ನೋಡಿಲ್ಲ. ನಾನು ಊಹೆ ಮೇಲೆ ತಲುಪಿದೆ ಎಂದು ಹೇಳುವುದನ್ನು ಬಿಟ್ಟರೆ ನಾನು ಸ್ವೀಕೃತಿಯನ್ನು ನೋಡಿಲ್ಲ ಎಂದರೆ ಸರಿ . ಅಂಚೆ ಇಲಾಖೆಯವರ ಸಾಕ್ಷಿ ವಿಚಾರಣೆ ಮಾಡಿ ನೋಟಿಸು ತಲುಪಿದೆ ಎಂದು ಪುರಾವೆ ಮಾಡಲು ತೊಂದರೆ ಇಲ್ಲ. ಆರೋಪಿಗೆ ನೋಟಿಸು ತಲುಪಿದರೆ ನಮ್ಮ ದುರುದ್ದೇಶ ಗೊತ್ತಾಗಿ ಅವರು ಪ್ರತಿರಕ್ಷೆ ತೆಗೆದುಕೊಳ್ಳಬಹುದೆಂಬ ಉದ್ದೇಶದಿಂದ ನಾವು ನೋಟಿಸಿನಲ್ಲಿ ಅವರ ಉದ್ಯೋಗವನ್ನು ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ-6 ಗಂಗಾವಳಿಯಲ್ಲಿರುವ ನಾಗರಾಜ ನಾರಾಯಣ ನಾಯ್ಕ ಎಂಬ ಒಬ್ಬ ಗುತ್ತಿಗೆದಾರರಿಗೆ ಜಾರಿಯಾಗಿರುವ ನೋಟಿಸು ಎಂದರೆ ಸರಿಯಲ್ಲ . ನಾಗರಾಜ ನಾರಾಯಣ ನಾಯ್ಕ ಇವರು ಕೆಲವೊಂದು ಬ್ಯಾಂಕುಗಳಲ್ಲಿ ಅಧ್ಯಕ್ಷರು ಇರುವಾರು ಎಂದರೆ ಮಾಹಿತಿ ಇಲ್ಲ . ಇವರು ಗಂಗಾವಳಿಯಲ್ಲಿ ಪ್ರಭಾವಿ ವ್ಯಕ್ತಿ ಎಂದರೆ ಮಾಹಿತಿ ಇಲ್ಲ . ಅವರಿಗೆ ನೋಟಿಸು ಜಾರಿಯಾದಾಗ ಅವರು ನಮ್ಮ ಬ್ಯಾಂಕಿನ ಮ್ಯಾನೇಜರ್ ಗೆ ಫೋನ್ ಮಾಡಿ ನನಗೆ ಏಕೆ ನೋಟಿಸು ಕಳಿಸಿದ್ದೀರಿ ಎಂದು ಕೇಳಿದ್ದರು ಎಂದರೆ ಮಾಹಿತಿ ಇಲ್ಲ.

ಪಿಡಬ್ಲೂಃ 2

7. ಚೆಕ್ ನಲ್ಲಿರುವ ಸಹಿಯಲ್ಲಿರುವ ಇಂಕು ಹಾಗೂ ಬರವಣಿಗೆಯಲ್ಲಿರುವ ಇಂಕಿಗೂ ವ್ಯತ್ಯಾಸ ಇದೆ ಎಂದರೆ ಸಾಕ್ಷಿ ಒಂದೇ ತರಹ ಕಾಣುತ್ತದೆ ಎಂದು ನುಡಿದಿರುತ್ತಾರೆ. ಮೇಲ್ನೋಟಕ್ಕೆ ಕಂಡು ಬರುವ ವ್ಯತ್ಯಾಸ ಇದ್ದರೂ ಕೂಡ ನಾನು ಸುಳ್ಳು ಹೇಳುತ್ತೀದ್ದೇನೆ ಎಂದರೆ ಸರಿಯಲ್ಲ . ಇದರಲ್ಲಿರುವ ಬರವಣಿಗೆ ನನ್ನ ಮುಂದೆ ಆಗಿಲ್ಲ ಎಂದರೆ ಸರಿ . ಕಾರಣ ಅದರ ಮೇಲಿರುವ ಬರವಣಿಗೆ ಯಾರು ಮಾಡಿದ್ದಾರೆ ಹೇಳಲು ಆಗುವುದಿಲ್ಲ ಎಂದರೆ ಸರಿ . ಅದರಲ್ಲಿರುವ ಎಲ್ಲಾ ಬರವಣಿಗೆಯನ್ನು ನಮ್ಮ ಸಿಬ್ಬಂದಿಯವರೇ ಮಾಡಿರುತ್ತಾರೆ ಎಂದರೆ ಸರಿಯಲ್ಲ . ದಿಃ 28-05-2021ರಂದು ಕಾನೂನುಬದ್ಧವಾಗಿ ಎಷ್ಟು ಹಣ ಬರಬೇಕಾಗಿತ್ತು ಎಂದು ತೋರಿಸಲು ಯಾವುದೇ ದಾಖಲಾತಿ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ . ನಾವು ಹಾಜರು ಪಡಿಸಿದ ಅಕೌಂಟ್ ಸ್ಟೇಟ್ ಮೆಂಟ್ ಪ್ರಕಾರ ಬರಬೇಕಾಗಿರುವ ಹಣ 1,44,983/- ರೂಪಾಯಿ ಎಂದು ನಮೂದಾಗಿದೆ ಎಂದರೆ ಸಾಕ್ಷಿ ಅಕೌಂಟ್ ಸ್ಟೇಟ್ ಮೆಂಟ್ ನೋಡಿ ಹೇಳಬೇಕು ಎಂದು ನುಡಿದಿರುತ್ತಾರೆ. ಸಾಕ್ಷಿ ಪುನಃ ದಾಖಲಾತಿಯನ್ನು ನೋಡಿ ಇದರಲ್ಲಿ ನಮೂದಾಗಿರುವುದು ಹೌದು ಎಂದು ನುಡಿದಿರುತ್ತಾರೆ. ನಮ್ಮ ಬ್ಯಾಂಕಿನಲ್ಲಿ ಒಂದೇ ತರಹದ ಸ್ಟೇಟ್ ಮೆಂಟ್ ನ್ನು ಮೆಂಟೆನ್ ಮಾಡುತ್ತೇವೆ . ಅದು ಕೂಡ ಇಲ್ಲಿ ನಮೂದಾಗಿರುವುದು ದಿಃ 31-03-2021 ರಂದು ಬರಬೇಕಾದ ಹಣ ಎಂದರೆ ಸರಿ. ಅದರ ನಂತರ ಎಷ್ಟು ಪೆಮೆಂಟ್ ಆಗಿದೆ ಎಂಬ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿ . ನಮ್ಮ ಬ್ಯಾಂಕಿನಲ್ಲಿ ಅಕೌಂಟ್ ಸ್ಟೇಟಮೆಂಟ್ ನ್ನು ಸಾಪ್ಟವೇರ್ ಮೂಲಕ ಮೆಂಟೆನ್ ಮಾಡುತ್ತೇವೆ ಎಂದರೆ ಸರಿ . ಯಾವುದೇ ವ್ಯತ್ಯಾಸಗಳು ಇರಬಾರದು ಅದು ಸ್ಪಷ್ಟವಾಗಿ ಇರಬೇಕು ಎಂಬ ಕಾರಣಕ್ಕೆ ಸಾಪ್ಟವೇರ್ ಮೆಂಟೆನ್ ಮಾಡುತ್ತೇವೆ ಎಂದರೆ ಸರಿ . ಎಷ್ಟು ವರ್ಷದ ನಂತರ ತೆಗೆದರೂ ಕೂಡ ಸ್ಟೇಟಮೆಂಟ್ ನಲ್ಲಿ ಯಾವುದೇ ಬದಲಾವಣೆ ಆಗುವುದಿಲ್ಲ ಅದು ಹೇಗಿರುತ್ತದೆ ಹಾಗೆಯೇ ಇರುತ್ತದೆ ಎಂದರೆ ಸರಿ . ಫಿರ್ಯಾದಿನಲ್ಲಿ ಚೆಕ್ ನಲ್ಲಿ ನಮೂದಿಸಿದಷ್ಟು ಹಣ ಬರುವುದು ಇದೆ ಎಂದು ಮೊದಲಿನ ಮ್ಯಾನೇಜರ್ ಬಸವರಾಜ್ ತಿಳಿಸಿರುತ್ತಾರೆ. ಯಾವ ಕಾರಣಕ್ಕಾಗಿ ಕಾನೂನುಬದ್ಧವಲ್ಲದ ಹಣ ಬರಬೇಕಾಗಿದೆ ಎಂದು ತಿಳಿಸಿರುತ್ತಾರೆ ಗೊತ್ತಿಲ್ಲ . ಈ ಪ್ರಕರಣದಲ್ಲಿ ನಾವು ಹೇಳಿದಷ್ಟು ಹಣ

ಕಾನೂನುಬದ್ಧವಾಗಿ ಆರೋಪಿ ಕೊಡಬೇಕಾಗಿಲ್ಲ ಎಂದರೆ ಸರಿಯಲ್ಲ. ಆರೋಪಿ ನಮ್ಮ ಬ್ಯಾಂಕಿಗೆ ಬಂದಾಗ ಕಳೆದುಹೋದ ಚೆಕನ್ನು ಇಟ್ಟುಕೊಂಡು ಅದರ ಮೇಲೆ ಬರವಣಿಗೆ ಮಾಡಿ ಹಾಜರು ಪಡಿಸಿದ್ದೇವೆ ಎಂದರೆ ಸರಿಯಲ್ಲ. ಆರೋಪಿ ನಮ್ಮ ಬ್ಯಾಂಕಿಗೆ ಬಂದು ಚೆಕ್ ನ್ನು ನೀಡಿ ಇದನ್ನು ಹಾಜರು ಪಡಿಸಿ ನಗದೀಕರಣಗೊಳಿಸಿಕೊಳ್ಳಿ ಎಂದು ಹೇಳಿದ್ದು ಇಲ್ಲ ಎಂದರೆ ಸರಿಯಲ್ಲ. ಸಿಕ್ಕಂತಹ ಚೆಕ್ ನ್ನು ಇಟ್ಟುಕೊಂಡು ಕಾನೂನುಬಾಹಿರವಾಗಿ ಹಣ ಪಡೆದುಕೊಳ್ಳಲು ದಾಖಲಿಸಿದಂತಹ ಪ್ರಕರಣವಾಗಿದೆ ಎಂದರೆ ಸರಿಯಲ್ಲ . ಅದೇ ಕಾರಣಕ್ಕೆ ಆರೋಪಿಯ ವಿಳಾಸವನ್ನು ಸ್ಪಷ್ಟವಾಗಿ ಆತನಿಗೆ ತಲುಪುವಂತೆ ನಮೂದಿಸಿಲ್ಲ ಎಂದರೆ ಸರಿಯಲ್ಲ. ಈ ಮಾದಲಿನ ಶಾಖಾ ವ್ಯವಸ್ಥಾಪಕರಾದ ಬಸವರಾಜರವರು ದಾಖಲಿಸಿದ ಸುಳ್ಳು ಪ್ರಕರಣಕ್ಕೆ ಪೂರಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ . ಈ ಮೊದಲಿನ ಮ್ಯಾನೇಜರ್ ರವರು ಇನ್ನುಳಿದ ಪ್ರಕರಣಗಳಲ್ಲಿ ಪ್ರತಿನಿಧಿಸುತ್ತಿದ್ದರೂ ಕೂಡ ತಾನು ಮಾಡಿದ ಸುಳ್ಳು ಪ್ರಕರಣದ ಬಗ್ಗೆ ಗೊತ್ತಾಗುತ್ತದೆ ಎಂದು ಈ ಪ್ರಕರಣವನ್ನು ಅವರು ಪ್ರತಿನಿಧಿಸುತ್ತಿಲ್ಲ ಎಂದರೆ ಸರಿಯಲ್ಲ . ಅವರು ಸೃಷ್ಟಿಸಿ ಹಾಜರು ಪಡಿಸಿದ ದಾಖಲಾತಿಗಳನ್ನು ನೋಡಿಕೊಂಡು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು

ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.